## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಇವರ ನಿಯಮ–72ರಡಿಯ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.

**ವಿಷಯ:–**

ಅನುದಾನರಹಿತ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗೆ ಕನಿಷ್ಠ ಮೂಲವೇತನ ಬ್ಯಾಂಕ್ ಮೂಲಕ ವೇತನ ಪಾವತಿ, ಸೇವಾ ಪುಸ್ತಕ ಇಡುವುದು ರಜೆ ಹಾಗೂ ಇತರೆ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸುವ ಬಗ್ಗೆ ಸರ್ಕಾರವು ಆದೇಶ ಸಂಖ್ಯೆ: ಇಡಿ 104 ಎಸ್ಇಡಿ 2005ನ್ನು ದಿನಾಂಕ: 12.01.2006ರಂದು ಹೊರಡಿಸಿ ಸುಮಾರು 13 ವರ್ಷಗಳು ಗತಿಸಿದ್ದು, ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಬಗ್ಗೆ ಸರ್ಕಾರ ಸುಮಾರು 20ಕ್ಕು ಹೆಚ್ಚು ಆದೇಶ ಹಾಗೂ ಸುತ್ತೋಲೆಗಳನ್ನು ಹೊರಡಿಸಿದ್ದರೂ ಕೂಡ ಆಡಳಿತ ಮಂಡಳಿಗಳ ಹಾಗೂ ಇಲಾಖೆಯ ಅಧಿಕಾರಿಗಳ ಅಪವಿತ್ರ ಮೈತ್ರಿಯಿಂದಾಗಿ ಅನುದಾನ ರಹಿತ ಶಾಲೆಗಳ ಸಿಬ್ಬಂದಿಗಳಿಗೆ ನ್ಯಾಯಯುತವಾಗಿ ಸಿಗಬೇಕಾದ ಸೌಲಭ್ಯಗಳು ದೊರಕುತ್ತಿಲ್ಲ.

ಈ ಕುರಿತು ಹಲವಾರು ಸಭೆಗಳಲ್ಲಿ ಚರ್ಚಿಸಿದರೂ ಅಧಿಕಾರಿಗಳು ಆದೇಶಗಳ ಅನುಷ್ಠಾನವನ್ನು ಕಾಟಾಚಾರಕ್ಕೆ ಮಾಡಿ ಅಂಕಿ–ಅಂಶಗಳನ್ನು ಒದಗಿಸುತ್ತಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಅಲ್ಲದೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡದ ಆದೇಶ ಸಂಖ್ಯೆ ರಿಟ್ ಪಿಟಿಷನ್ ಸಂಖ್ಯೆ 107909/2018ರ ಯಥಾವತ್ತಾಗಿ ಜಾರಿಗೊಳಿಸಲು ಆದೇಶಿಸಿದ್ದರೂ ಕೂಡಾ ಇನ್ನೂವರೆಗೆ ಅನುದಾನ ರಹಿತ ಸಿಬ್ಬಂದಿಗಳಿಗೆ ನ್ಯಾಯ ಸಿಗದ್ದಿದ್ದರಿಂದ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನಾ ಪ್ರಕರಣ ದಾಖಲಾಗಿದೆ ಎಂದು ತಿಳಿದು ಬಂದಿದೆ.

ಆದುದರಿಂದ, ಅನುದಾನ ರಹಿತ ಆಂಗ್ಲ ಮಾಧ್ಯಮ ಶಾಲೆಗಳ ನೌಕರರಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸದೇ ಇರುವ ಶಿಕ್ಷಣ ಸಂಸ್ಥೆಗಳ ಮಾನ್ಯತೆ ರದ್ದುಪಡಿಸುವುದರೊಂದಿಗೆ ಸರ್ಕಾರದ ಆದೇಶಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಕ್ರಮ ವಹಿಸಬೇಕಾದ ಅಧಿಕಾರಿಗಳು ನಿರ್ಲಕ್ಷ್ಯ ತೋರಿಸಿದ್ದು, ಕಂಡು ಬಂದಲ್ಲಿ ಅವರುಗಳ ವಿರುದ್ಧ ಕ್ರಮಕೈಗೊಳ್ಳುವ ಬಗ್ಗೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಕಾರ್ಮಿಕ ಸಚಿವರ ಗಮನ ಸೆಳೆಯ ಬಯಸುತ್ತೇನೆ.

### ಹೇಳಿಕೆ

ಅನುದಾನರಹಿತ ಖಾಸಗಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕನಿಷ್ಠ ವೇತನ, ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ತಖ್ತೆ:, ಸೇವಾ ಪುಸ್ತಕ ನಿರ್ವಹಣೆ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಕರ್ನಾಟಕ ಶಿಕ್ಷಣ ಕಾಯಿದೆಯ–1983ರ ಸೆಕ್ಷನ್–88, 89 ಮತ್ತು 90 ರಲ್ಲಿ ಪ್ರಸ್ತಾಪಿಸಲಾಗಿದೆ.

**1.** ಕರ್ನಾಟಕ ಶಿಕ್ಷಣ ಸಂಸ್ಥೆಗಳು[ಖಾಸಗಿ ಅನುದಾನ ರಹಿತ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ಸೇವಾ ಷರತ್ತು ಮತ್ತು ನಿಯಮಗಳು] 2005ರ ನಿಯಮಗಳಂತೆ ಖಾಸಗಿ ಅನುದಾನರಹಿತ ಶಾಲೆಗಳಲ್ಲಿನ ಸಿಬ್ಬಂದಿಗಳಿಗೆ ಶಾಲೆಯ ಆಡಳಿತ ಮಂಡಳಿಗಳು ಕೆಳಕಂಡಂತೆ ಸೇವಾ ಭದ್ರತೆ/ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕಾಗಿದೆ.

ಅ. ನಿಯಮ–3[ಬಿ] ರನ್ವಯ ಅನುದಾನರಹಿತ ಶಾಲೆಗಳಲ್ಲಿನ ಸಿಬ್ಬಂದಿಗಳಿಗೆ ವೇತನವನ್ನು ತತ್ಸಮಾನ ಸರ್ಕಾರಿ ಸೇವೆಯಲ್ಲಿನ ಸಿಬ್ಬಂದಿಗಳ ಕನಿಷ್ಠ ಮೂಲ ವೇತನಕ್ಕೆ ಸಮನಾದ ವೇತನವನ್ನು ನೀಡಬೇಕು.

ಆ. ನಿಯಮ–4ರನ್ವಯ ಅನುದಾನರಹಿತ ಶಾಲಾ ಸಿಬ್ಬಂದಿಗಳಿಗೆ ರಜಾ ಸೌಲಭ್ಯಗಳನ್ನು ನೀಡಬೇಕು.

ಇ. ನಿಯಮ–5ರನ್ವಯ ಅನುದಾನರಹಿತ ಶಾಲಾ ಸಿಬ್ಬಂದಿಗಳ ತಖ್ತೆ: ಹಾಗೂ ಸೇವಾ ಪುಸ್ತಕವನ್ನು ನಿರ್ವಹಿಸಬೇಕು.

ಈ. ನಿಯಮ-5ರನ್ವಯ ಅನುದಾನರಹಿತ ಶಾಲಾ ಸಿಬ್ಬಂದಿಗಳಿಂದ ಶಾಲೆಯ ಆಡಳಿತ ಮಂಡಳಿಯವರು ಒತ್ತಾಯ ಪೂರ್ವಕವಾಗಿ ದಿನಾಂಕ ನಮೂದಿಸದೇ ರಾಜೀನಾಮೆ ಪತ್ರವನ್ನು ಪಡೆಯತಕ್ಕದ್ದಲ್ಲ.

2. ಖಾಸಗಿ ಅನುದಾನರಹಿತ ಶಾಲೆಗಳ ಸಿಬ್ಬಂದಿಗಳಿಗೆ ಶಾಲೆಗಳ ಆಡಳಿತ ಮಂಡಳಿಯವರು ಕರ್ನಾಟಕ ಶಿಕ್ಷಣ ಕಾಯಿದೆಯ-1983ರ ಸೆಕ್ಷನ್- 89 ಮತ್ತು 90 ರಲ್ಲಿ ಪ್ರಸ್ತಾಪಿಸಿರುವಂತೆ ಅಗತ್ಯ ಸೇವಾ ಸೌಲಭ್ಯಗಳನ್ನು ಒದಗಿಸದೇ ನಿಯಮಗಳನ್ನು ಉಲ್ಲಂಘಿಸಿದ ಶಾಲೆಗಳ ವಿರುದ್ಧ ವಿಚಾರಣೆಯನ್ನು ನಡೆಸಿ ದಂಡ ವಿಧಿಸುವ ಅಧಿಕಾರವನ್ನು ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ (DERA) ಕ್ಕೆ ನೀಡಲಾಗಿದ್ದು, ಈ ಸಂಬಂಧ ಕರ್ನಾಟಕ ಶಿಕ್ಷಣ ಕಾಯಿದೆಗೆ ಕೆಳಕಂಡಂತೆ ತಿದ್ದುಪಡಿ ತಂದು ಹೊಸದಾಗಿ ಸೆಕ್ಷನ್-125 ಎ ಅನ್ನು ಸೇರ್ಪಡೆ ಮಾಡಲಾಗಿದ್ದು ವಿವರ ಕೆಳಕಂಡಂತಿದೆ.

**"125A. Penalty for contravention of section 88, 89 and 90.-** Any educational institution is found guilty of contravention of either of sections 88, 89 and 90 in an enquiry conducted, after giving an opportunity of being heard, by **District Education Regulatory Authority, it shall impose a penalty which may extend to five lakh rupees."**

3. ರಾಜ್ಯ ಎಲ್ಲಾ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೇವಾ ಭದ್ರತೆಯನ್ನು ಒದಗಿಸದ ಶಾಲೆಗಳ ಆಡಳಿತ ಮಂಡಳಿಗಳ ವಿರುದ್ಧ ಕರ್ನಾಟಕ ಶಿಕ್ಷಣ ಕಾಯಿದೆ ಸೆಕ್ಷನ್-125[ಎ] ರಂತೆ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ(DERA)ದಲ್ಲಿ ಪ್ರಕರಣ ದಾಖಲಿಸಿ ನಿಯಮಾನುಸಾರ ಕ್ರಮಕೈಗೊಳ್ಳುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಂದ ದಿನಾಂಕ:31.08.2016, 11.01.2017 ಮತ್ತು 09.10.2017ರನ್ವಯ ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ.

4. ಮುಂದುವರೆದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ರಿಟ್ ಅರ್ಜಿ ಸಂಖ್ಯೆ:107909/2017ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:01.06.2018ರಂದು ನೀಡಿರುವ ತೀರ್ಪಿನನ್ವಯ ಸರ್ಕಾರದ ಆದೇಶ ಸಂಖ್ಯೆ:ಇಡಿ 273 ಎಸ್‌ಎಲ್‌ಬಿ 2018 ದಿನಾಂಕ:27.12.2018ರ ಆದೇಶದಲ್ಲಿ ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳು ತನ್ನ ಅಧೀನದಲ್ಲಿ ನಡೆಯುತ್ತಿರುವ ಅನುದಾನರಹಿತ ಪ್ರಾಥಮಿಕ/ಪ್ರೌಢಶಾಲಾ/ಪದವಿ ಪೂರ್ವ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಸೇವಾ ಭದ್ರತೆಯನ್ನು ಕಡ್ಡಾಯವಾಗಿ ಅನುದಾನರಹಿತ ಶಿಕ್ಷಣ ಸಂಸ್ಥೆಯೇ ನೀಡಲು ಆದೇಶಿಸಲಾಗಿದೆ.

5. ಅನುದಾನ ರಹಿತ ಆಂಗ್ಲ ಮಾಧ್ಯಮ ಶಾಲೆಗಳ ನೌಕರರಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸದೇ ಇರುವ ಶಿಕ್ಷಣ ಸಂಸ್ಥೆಗಳ ವಿರುದ್ಧ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಸರ್ಕಾರದ ಆದೇಶಗಳನ್ನು ಅನುಷ್ಠಾನಗೊಳಿಸದೆ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ದೂರುಗಳು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

(ಎಸ್.ಸುರೇಶಕುಮಾರ್)
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ,**
**ಕಾರ್ಮಿಕ ಸಚಿವರು.**

**ಸಂಖ್ಯೆ : ಇಪಿ 54 ಎಸ್‌ಎಲ್‌ಬಿ 2019**

ಅನುಬಂಧ-1

88, **Appointment of employees.-** No person who does not possess the requisite qualification prescribed under Section 87 shall, on and from the date of commencement of this Act, be appointed as an employee in recognised private educational institution.

**89. Pay and allowances of teachers and other employees.-** The pay and allowances of persons employed in the recognised private institutions shall be paid on or before such day in every month, in such manner and by or through such officer or authority as may be prescribed.

**90. Schedule of employment to be maintained.-**

(1) Every private educational institution shall maintain a Schedule of employees indicating therein the number of persons in its employment, the name and qualification of each employee, the grade of pay and such other particulars as may be prescribed.

(2) Within three months from the date of commencement of this Act and within a like period after any alteration in such schedule is made, a private educational institution shall submit a copy of the schedule or alterations made therein, as the case may be, to the Director of the Department concerned or such other officer as may be notified for this purpose.

(3) The Schedule of appointments for the time being in force shall be kept at the office of the private educational institution and shall during office hours, be open free of charge, to inspection by any employee of that private educational institution. The names and qualifications of the teaching staff shall be displayed in a prominent place in the institution.